# ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ

ತಲಘಟ್ಟಪುರ, ಕನಕಪುರರಸ್ತೆ, ಬೆಂಗಳೂರು – 560 109.

ಇ-ಮೇಲ್ : kssrdi12@gmail.com, ವೆಬ್ :www.karnataka.gov.in/kssrdi

ಸಂಖ್ಯೆ: ಕರಾರೇಸಂಅಸಂ/ಸಿಬ್ಬಂದಿ-1/ಕೈ-ಕ 371(ಜೆ)/2024-25 ದಿನಾಂಕ:10.10.2024.

## ಪ್ರಕಟಣೆ

ಕರ್ನಾಟಕರಾಜ್ಯರೇಷ್ಮೆ ಸಂಶೋಧನೆ ಮತ್ತುಅಭಿವೃದ್ಧಿ ಸಂಸ್ಥೆಯಲ್ಲಿ ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ 371(ಜೆ) ಅಡಿ ಈ ಹಿಂದೆ ದಿನಾಂಕ: 07.02.2022. ರಂದು ಪ್ರಕಟಣೆ ಹೊರಡಿಸಿದ್ದು ಕಾರಣಾಂತರಗಳಿಂದ ಇದನ್ನು ರದ್ದುಪಡಿಸಿದೆ. ಪ್ರಸ್ತುತ 371 (ಜೆ) ಅಡಿಯಲ್ಲಿ ಸರ್ಕಾರದ ಪತ್ರ ಸಂಖ್ಯೆ: ರೇಷ್ಮೆ/62/ರೇಸೇವಿ/2022, ದಿನಾಂಕ:04.03.2024. ರರೀತ್ಯಾ ಈ ಕೆಳಕಂಡ ವೃಂದದ ಹುದ್ದೆಗಳ ನೇಮಕಾತಿಗೆ ಮಾತ್ರಅನುಮೋದನೆ ನೀಡಿರುವಕಾರಣ, ಮರು ಪ್ರಕಟಣೆ ಹೊರಡಿಸುತ್ತಿದ್ದು ಈ ಹಿಂದೆಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಬಹುದಾಗಿದೆ. ಹುದ್ದೆಗಳ ವಿವರ ಈ ಕೆಳಕಂಡಂತಿದೆ.

1. ರಾಜ್ಯಮಟ್ಟದ ಸ್ಥಳೀಯ ವೃಂದ.

| ಕ್ರ.ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು | ಹುದ್ದೆಗಳ ವರ್ಗೀಕರಣ | | | | |
|---|---|---|---|---|---|---|---|
| | | | ಸಾ.ಅ | ಸಾ.ಮ.ಅ | ಪ.ಜಾ | ಪ.ಪಂ. | ಪ್ರ-01 |
| 01 | ವಿಜ್ಞಾನಿ-ಬಿ | 01 | – | – | 01 | – | – |
| 02 | ಹಿರಿಯ ಸಂಶೋಧನಾ ಸಹಾಯಕರು. | 05 | 01 | 01 | 01 | 01 | 01 |
| 03 | ದ್ವಿತೀಯದರ್ಜೆ ಸಹಾಯಕರು. | 01 | – | – | 01 | – | – |

- ಈ ಮೇಲಿನ ಹುದ್ದೆಗಳ ಹೆಚ್ಚಿನ ವಿವರ, ಅರ್ಜಿ ನಮೂನೆ, ಮೀಸಲಾತಿ ವಿವರ, ವಯಸ್ಸು, ವೇತನ, ಅರ್ಹತೆ, ಮತ್ತುಇತರೆ ವಿವರಗಳನ್ನು ಸಂಸ್ಥೆಯ ವೆಬ್ ಸೈಟ್ ನಲ್ಲಿ ಪಡೆಯಬಹುದಾಗಿದೆ.
- ಸಂಪೂರ್ಣವಾಗಿ ಭರ್ತಿ ಮಾಡಿದಅರ್ಜಿಯನ್ನುಎಲ್ಲಾ ದಾಖಲಾತಿಗಳೊಂದಿಗೆ ದಿನಾಂಕ:30.10.2024 ರ ಸಂಜೆ 4.00 ಗಂಟೆಯೊಳಗೆ ನಿರ್ದೇಶಕರು, ಕ.ರಾ.ರೇ.ಸಂ.ಅ.ಸಂಸ್ಥೆ, ತಲಘಟ್ಟಪುರ, ಕನಕಪುರರಸ್ತೆ, ಬೆಂಗಳೂರು-560-109 ಇವರ ವಿಳಾಸಕ್ಕೆ ನೊಂದಾಯಿತ ಅಂಚೆ ಮೂಲಕ ಮಾತ್ರ ತಲುಪುವಂತೆ ಕಳುಹಿಸಬೇಕು, ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟ್-www.kssrdi.karnataka.gov.in./ ನಲ್ಲಿ ಪಡೆಯಬಹುದಾಗಿರುತ್ತದೆ.

ನಿರ್ದೇಶಕರು,
ಕರಾರೇಸಂಅಸಂಸ್ಥೆ.

**ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ**

**ತಲಘಟ್ಟಪುರ, ಕನಕಪುರ ರಸ್ತೆ, ಬೆಂಗಳೂರು-560 109**

ಇ-ಮೇಲ್-kssrdi12@gmail.com, ವೆಬ್- www.kssrdi.karnataka .gov.in

ದೂರವಾಣಿ ಸಂಖ್ಯೆ: 080-23902957


ನೇಮಕಾತಿ ಪ್ರಕಟಣೆ ಸಂ: ಕರಾರೇಸಂಅಸಂ/ಸಿಬ್ಬಂದಿ-01/ಹೈ-ಕ.ಹುಭ/2024-25 ದಿನಾಂಕ: 10.10.2024.

## ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ 371 (ಜೆ) ಅಡಿ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ಸರ್ಕಾರದ ಒಂದು ಸ್ವಾಯತ್ತ ಅನುಧಾನಿತ ಸಂಸ್ಥೆಯಾಗಿದ್ದು. ಕರ್ನಾಟಕ ಸೊಸೈಟಿ ನೊಂದಣಿ ಕಾಯ್ದೆ 1960 ರಡಿ ನೊಂದಣಿಯಾಗಿರುತ್ತದೆ. ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ವಯ ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ 371 (ಜೆ) ಅಡಿ ಗುರುತಿಸಿರುವ ಹುದ್ದೆಗಳನ್ನು ಸಂಸ್ಥೆಯ ಮುಖ್ಯ ಕಛೇರಿ, ತಲಘಟ್ಟಪುರ, ಬೆಂಗಳೂರು. ಇಲ್ಲಿ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ರಾಜ್ಯ ಮಟ್ಟದ ಸ್ಥಳೀಯ ವೃಂದ.

| ಕ್ರ.ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು | ವರ್ಗ | ವೇತನ ಶ್ರೇಣಿ | ವಿದ್ಯಾರ್ಹತೆ |
|---|---|---|---|---|---|
| 01 | ವಿಜ್ಞಾನಿ-ಬಿ<br><br>1.(silkworm Improvement/ Breeding & Genetics)<br>**or**<br><br>2. (Silkworm Pathology) | 01 | ಪ.ಜಾ | ರೂ.83700-155200. | 1. M.Sc. First Class in Sericulture/ Zoology or M.Sc.(Agri) Entomology.<br>2. Doctoral Degree in Sericulture/ Entomology/Zoology with specialisation in insect genetics/Animal Breeding & Genetics.<br>3. Post-Doctoral research experience of 2 years in Insect Breeding/Animal Breeding & Genetics.<br>**Or**<br>1. M.Sc. First Class in Sericulture/ Zoology or M.Sc.(Agri) Entomology.<br>2. Doctoral Degree in Sericulture/ Entomology/Zoology with specialisation in Entomology/Insect Pathology/Microbiology/pest management<br>3. Post-Doctoral research experience of 2 years in Insect Pathology/Microbiology/pest management. |

| | | | | | |
|---|---|---|---|---|---|
| 02 | ಹಿರಿಯ ಸಂಶೋಧನಾ ಸಹಾಯಕರು<br><br>A. ಹಿಪ್ಪು ನೇರಳೆ ವಿಭಾಗಕ್ಕೆ-01<br>B. ರೇಷ್ಮೆ ಕೃಷಿ ವಿಭಾಗಕ್ಕೆ -02<br>C.ರೇಷ್ಮೆ ತಾಂತ್ರಿಕ ವಿಭಾಗಕ್ಕೆ -01 | 05 | ಸಾ.ಅ<br>ಮ..ಅ<br>ಪ.ಜಾ<br>ಪ.ಪಂ<br>ಪ್ರ-1 | ರೂ. 44425-83700. | A. Moriculture: M.Sc., I Class in Sericulture/Botany M.Sc. (Agri), Plant Science.<br>B.Sericulture: M.Sc., I Class in Sericulture/Zoology/Entomology or M.Sc. (Agri.) in Entomology/ Sericulture.<br><br>C. Silk Technology: B.Tech./BE (Textile)/B.Sc. Tech. (Textile Chemistry)/ B.Tech. in Silk Technology.<br><br>D. Desirable P.hD. in above subjects |
| 03 | ದ್ವಿತೀಯ ದರ್ಜೆ ಸಹಾಯಕರು | 01 | ಪ.ಜಾ | ರೂ.34100-67600. | A. P.U.C. or equivalent qualification.<br>B. 2 Years' Experience in any govt/private office. With kannada and English Typing. |

**ಟಿಪ್ಪಣಿ:** ಸಾ.ಅ. ಸಾಮಾನ್ಯ ಅಭ್ಯರ್ಥಿ, ಪ.ಜಾ. -ಪರಿಶಿಷ್ಟ ಜಾತಿ, ಪ.ಪಂ-ಪರಿಶಿಷ್ಟ ಪಂಗಡ, ಮ.ಅ. -ಮಹಿಳಾ ಅಭ್ಯರ್ಥಿ ಗ್ರಾ.ಅ-ಗ್ರಾಮೀಣ ಅಭ್ಯರ್ಥಿ, ಪ್ರವರ್ಗ-1.

**ವಯೋಮಿತಿ** : ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು ಮತ್ತು ಗರಿಷ್ಠ ವಯೋಮಿತಿಯು ದಿನಾಂಕ: **30.10.2024 ಕ್ಕೆ** ಈ ಕೆಳಕಂಡಂತೆ ನಿಗದಿಗೊಳಿಸಿದೆ.

01. ವಿಜ್ಞಾನಿ-ಬಿ ಹುದ್ದೆಗೆ – ಪರಿಶಿಷ್ಟ ಜಾತಿ = 43 ವರ್ಷಗಳು, ಮೀರಿರಬಾರದು.
02. ಹಿರಿಯ ಸಂಶೋಧನಾ ಸಹಾಯಕರ ಹುದ್ದೆಗೆ – ಸಾಮಾನ್ಯ ಮಹಿಳಾ ಮತ್ತು ಗ್ರಾಮೀಣ
- ಅಭ್ಯರ್ಥಿ - 38 ವರ್ಷಗಳು
- ಪರಿಶಿಷ್ಟ ಜಾತಿ - 43 ವರ್ಷಗಳು,
- ಪರಿಶಿಷ್ಟ ಪಂಗಡ - 43 ವರ್ಷಗಳು
- ಪ್ರವರ್ಗ-1 41 ವರ್ಷಗಳು ಮೀರಿರಬಾರದು

03. ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ - - 43 ವರ್ಷಗಳು ಮೀರಿರಬಾರದು
( ಸರ್ಕಾರಿ ಆದೇಶ ಸಂ: ಸಿಆಸುಇ 166 ಸೆನೆನಿ 2024 ದಿನಾಂಕ: 10.09.2024 ರಂತೆ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಗರಿಷ್ಠ ವಯೋಮಿತಿಯಲ್ಲಿ 03 ವರ್ಷಗಳ ಸಡಿಲಿಕೆಯನ್ನು ನೀಡಲಾಗಿರುತ್ತದೆ.)

04. ಈಗಾಗಲೇ ಪ್ರಕಟಣೆ ಹೊರಡಿಸಿರುವ ನೇಮಕಾತಿ ಪ್ರಕಟಣೆ ಸಂ: ಕರಾರೇಸಂಅಸಂ/ /ಸಿಬ್ಬಂದಿ- 1/ಹೈ-ಕ ಹು.ಭ/2021-22 ದಿ: 07.02.2022 ರಲ್ಲಿ ಸಲ್ಲಿಸಿರುವ ಅರ್ಜಿದಾರರು ಪುನಃ ಅರ್ಜಿ ಸಲ್ಲಿಸಲು ಅವಶ್ಯಕತೆ ಇರುವುದಿಲ್ಲ. ಆದರೆ ಸಲ್ಲಿಸಿರುವ ಅರ್ಜಿಗಳನ್ನು ನವೀಕರಿಸಬಹುದು

**ನೇಮಕಾತಿ ವಿಧಾನ:** ಕರ್ನಾಟಕ ಸಾರ್ವಜನಿಕ ಉದ್ಯೋಗ ( ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿ ಮೀಸಲಾತಿ ) ಆದೇಶ 2013 ರ ಹಾಗೂ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ನಿಯಮ (13) ರಿಂದ (17) ರ ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ವಯ ಮೆರಿಟ್ ಆಧಾರದ ಮೇರೆಗೆ ಆಯಾ ಹುದ್ದೆಯ 1:3 ರಂತೆ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ/ನೇಮಕಾತಿ ಮಾಡಲಾಗುವುದು.

ಅರ್ಜಿ ಶುಲ್ಕ : ಎಸ್.ಸಿ/ಎಸ್.ಟಿ. ಅಭ್ಯರ್ಥಿಗಳು ರೂ.500/-ಗಳು, ಪ್ರವರ್ಗ-I ರಿಂದ ಪ್ರವರ್ಗ-III (ಬಿ)ವರೆಗೆ ರೂ.750/-ಗಳು ಹಾಗೂ ಇತರೇ ಅಭ್ಯರ್ಥಿಗಳು ರೂ. 1000/-(ಒಂದು ಸಾವಿರ) ಗಳ ಅರ್ಜಿಗಳ ಪರಿಶೋಧನಾ ಶುಲ್ಕವನ್ನು ಪೋಸ್ಟಲ್ ಆರ್ಡರ್ ಮೂಲಕ ನಿರ್ದೇಶಕರು, ಕರಾರೇಸಂಅಸಂಸ್ಥೆ, ತಲಘಟ್ಟಪುರ ಇವರ ಹೆಸರಿಗೆ ಪಾವತಿಸಬೇಕು. ಈ ಮೊತ್ತವನ್ನು ಹಿಂತಿರುಗಿಸಲಾಗುವುದಿಲ್ಲ.

ಕೊನೆಯ ದಿನಾಂಕ : ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯನ್ನು ನಿಗದಿಪಡಿಸಿರುವ ಎಲ್ಲಾ ದಾಖಲಾತಿಗಳೊಂದಿಗೆ <u>ದಿನಾಂಕ: 30.10.2024 ರಂದು ಸಂಜೆ 4.00 ಗಂಟೆಯೊಳಗೆ</u> ನಿರ್ದೇಶಕರು, ಕರಾರೇಸಂಅಸಂಸ್ಥೆ ತಲಘಟ್ಟಪುರ, ಕನಕಪುರ ರಸ್ತೆ, ಬೆಂಗಳೂರು-560 109 ಈ ವಿಳಾಸಕ್ಕೆ ನೊಂದಾಯಿತ ಅಂಚೆ ಮೂಲಕ ಮಾತ್ರ ತಲುಪುವಂತೆ ಕಳುಹಿಸಬೇಕು. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆಗಳು: 1. ಈ ಮೇಲಿನ ಎಲಾ ಹುದ್ದೆಗಳಿಗೆ ಕ.ರಾ.ರೇ.ಸಂ.ಅ.ಸಂಸ್ಥೆ, ತಲಘಟ್ಟಪುರ, ಬೆಂಗಳೂರು-560 109 ಇಲ್ಲಿನ website www.Kssrdi.karnataka.gov.in ಮೂಲಕ ಅರ್ಜಿಗಳನ್ನು ಪಡೆದುಕೊಳ್ಳುವುದು. ಭರ್ತಿ ಮಾಡಿದ ಅರ್ಜಿಯೊಂದಿಗೆ, ಎಲ್ಲಾ ಶೈಕ್ಷಣಿಕ ವರ್ಷಗಳ ಪದವಿ ಹಾಗೂ ಇತರೇ ಸರ್ಟಿಫಿಕೇಟುಗಳನ್ನು ದೃಢೀಕೃತದೊಂದಿಗೆ ಸಲ್ಲಿಸಬೇಕು. ಉದ್ಯೋಗಸ್ಥರಾದ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ತಮ್ಮ ಮೇಲಾಧಿಕಾರಿಗಳ ಮುಖೇನ ಕಳುಹಿಸಿದರೆ ಮಾತ್ರ ಅರ್ಜಿಗಳನ್ನು ಪರಿಗಣಿಸಲಾಗುವುದು.

2. ಅರ್ಜಿಯು ಈ ಕೆಳಕಂಡಂತೆ ಲಗತ್ತುಗಳನ್ನು ಹೊಂದಿರಬೇಕು.

ಎ) ಸ್ವಹಸ್ತಾಕ್ಷರವಿರುವ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಅರ್ಜಿಗೆ ಲಗತ್ತಿಸಬೇಕು.

ಬಿ) ದೃಢೀಕರಿಸಿದ ವರ್ಗಾವಣೆ ಪ್ರಮಾಣಪತ್ರ ಅಥವಾ ಅಂಕಪಟ್ಟಿ ಅಥವಾ ಕ್ಯುಮುಲೇಟಿವ್ ರೆಕಾರ್ಡ್‌ನ ಪ್ರತಿ.

ಸಿ) ದೃಢೀಕರಿಸಿದ ಜಾತಿ ಪ್ರಮಾಣ ಪತ್ರ,

ಡಿ) ದೃಢೀಕರಿಸಿದ ನಿಗದಿತ ಅರ್ಹತಾ ಪರೀಕ್ಷೆಯ ಅಂಕಪಟ್ಟಿಗಳ ಪ್ರತಿಗಳು.

ಇ) ದೃಢೀಕರಿಸಿದ ವಿದ್ಯಾರ್ಹತೆಯ ಪದವಿ ಪ್ರಮಾಣ ಪತ್ರಗಳು/ ಅನುಭವದ ಪ್ರಮಾಣ ಪತ್ರಗಳ ಪ್ರತಿ.

ಎಫ್) ಅನುಬಂಧ-ಎ, ಅರ್ಹತಾ ಪ್ರಮಾಣ ಪತ್ರ.

ಎಫ್) ಅನುಬಂಧ-ಬಿ, ವಾಸಸ್ಥಳ ಪ್ರಮಾಣ ಪತ್ರ. (ಹತ್ತು ವರ್ಷಗಳ ಕಾಲ ಸ್ಥಳೀಯವಾಗಿ ವಾಸವಾಗಿರಬೇಕು)

ಜಿ ) ಅನುಬಂಧ-ಇ, ಸಿಂಧುತ್ವ ಪ್ರಮಾಣ ಪತ್ರ,

ಹೆಚ್ ) ನಿಗದಿತ ನಮೂನೆಯಲ್ಲಿ ಗ್ರಾಮೀಣ ಅಭ್ಯರ್ಥಿಯ ಪ್ರಮಾಣ ಪತ್ರ.

3. ಅಭ್ಯರ್ಥಿಗಳು ಎಲ್ಲಾ ದಾಖಲಾತಿಗಳ / ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಅವಧಿಯೊಳಗೆ ಪಡೆದಿರಬೇಕು ಹಾಗೂ ಇದೆ ಮೂಲ ಪ್ರತಿಗಳನ್ನು ಸೂಚನೆ ನೀಡಿದ ಸಮಯದಲ್ಲಿ ತಪ್ಪದೆ ಹಾಜರುಪಡಿಸಬೇಕು.

4. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ, ಪ್ರತಿಯೊಂದು ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.

5. ಅಭ್ಯರ್ಥಿಯು ಯಾವುದೇ ಇಲಾಖೆ/ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಅಲ್ಲಿನ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಬೇಕು ಹಾಗೂ ಮುಖ್ಯಸ್ಥರ ನಿರಾಕ್ಷೇಪಣಾ ಪತ್ರ ಲಗತ್ತಿಸಿರಬೇಕು.

6. ಅರ್ಜಿ ಮತ್ತು ಲಗತ್ತುಗಳು ಹೊಂದಿರುವ ಲಕೋಟೆಯ ಮೇಲೆ "ಕರಾರೇಸಂಅಸಂಸ್ಥೆಯಲ್ಲಿನ -----------ಹುದ್ದೆಗೆ ಅರ್ಜಿ (ಪ್ರಾದೇಶಿಕ ಸ್ಥಳೀಯ ವೃಂದ/ ರಾಜ್ಯಮಟ್ಟದ ಸ್ಥಳೀಯ ವೃಂದದ ಜೊತೆಗೆ ಸಾಮಾನ್ಯ ಅಭ್ಯರ್ಥಿ/ಗ್ರಾಮೀಣ ಅಭ್ಯರ್ಥಿ/ಮಹಿಳಾ ಅಭ್ಯರ್ಥಿ)ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸಿ ಕಳುಹಿಸುವುದು.

ಉದಾಹರಣೆ: ವಿಜ್ಞಾನಿ-ಬಿ ಹುದ್ದೆಗೆ ಪ್ರಾದೇಶಿಕ ಸ್ಥಳೀಯ ವೃಂದದ ಸಾಮಾನ್ಯ ಅಭ್ಯರ್ಥಿಯು ಈ ಕೆಳಕಂಡಂತೆ ಲಕೋಟೆ ಮೇಲೆ ನಮೂದಿಸುವುದು." ಕರಾರೇಸಂಅಸಂಸ್ಥೆಯಲ್ಲಿನ ಹುದ್ದೆಗೆ ಅರ್ಜಿ (ಪ್ರಾದೇಶಿಕ ಸ್ಥಳೀಯ ವೃಂದದ ಸಾಮಾನ್ಯ ಅಭ್ಯರ್ಥಿ)".

7. ಅಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಿರುವ ಹಾಗೂ ನಿಗಧಿತ ಅವಧಿ ಮೀರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
8. ಈ ಮೇಲೆ ತಿಳಿಸಿದ ನೇಮಕಾತಿಯನ್ನು ಯಾವುದೇ ಸಂದರ್ಭದಲ್ಲಾದರೂ ರದ್ದುಗೊಳಿಸಲು ಸಂಸ್ಥೆಯು ಅಧಿಕಾರ ಹೊಂದಿರುತ್ತದೆ.
9. ಹೆಚ್ಚಿನ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪಡೆಯುವುದು ಅಥವಾ ಕಛೇರಿಯನ್ನು ಸಂಪರ್ಕಿಸಬಹುದು.

ನಿರ್ದೇಶಕರು
ಕರಾರೇಸಂಅಸಂಸ್ಥೆ.